# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : ಮೇರಿ ಲೂಯಿ ಬರ್ಕ್
ಸಂಗ್ರಹಾನುವಾದ : ಸ್ವಾಮಿ ವೀರೇಶಾನಂದ

## ಭಾಗ ೩೦

## ವೀರಯೋಧನ ಪುನರಾಗಮನ – ೩



ಸ್ವಾಮಿ ವಿವೇಕಾನಂದರು ಅಮೆರಿಕಾಗೆ ಬಂದು ಈಗಾಗಲೇ ಒಂದು ವರ್ಷವಾಗಿದೆ. ಇಷ್ಟಾದರೂ ತಮ್ಮ ದೇಶೀಯರಿಂದ ಅವರಿಗೆ ಯಾವುದೇ ಬೆಂಬಲವೂ ದೊರಕಲಿಲ್ಲ. ಸ್ವಾಮೀಜಿ ತಮ್ಮ ಪ್ರವಚನಗಳಿಂದ ಅಮೆರಿಕಾದಲ್ಲಿನ ತಮ್ಮ ಖರ್ಚನ್ನು ಸರಿದೂಗಿಸುವಷ್ಟು ಮಾತ್ರವೇ ಸಂಪಾದಿಸಿದರು. ಅವರು ಉಳಿಸಿಕೊಂಡದ್ದು ಅತ್ಯಲ್ಪ. ಈ ಬಗ್ಗೆ ಡೆಟ್ರಾಯ್ಟ್ ನ್ಯೂಸ್ ಪತ್ರಿಕೆಯು ತನ್ನ ೧೮೯೪ರ ಮಾರ್ಚ್ ೨೫ರ ಸಂಚಿಕೆಯಲ್ಲಿ ಪ್ರಕಟಿಸಿದ ಒಂದು ವರದಿಯನ್ನು ನಾವು ಗಮನಿಸಬೇಕು. ಅದರ ಪ್ರಕಾರ ಸ್ವಾಮೀಜಿಯವರು ಡೆಟ್ರಾಯ್ಟ್ ಮೊದಲಾದ ನಗರಗಳಲ್ಲಿ ಅತ್ಯಂತ ಪ್ರಸಿದ್ಧ ವಕ್ತಾರರಾಗಿದ್ದರೂ, ಅವರಿಗೆ ಸಿಕ್ಕ ವರಮಾನ ಬಹಳ ಕಡಿಮೆ. ಆ ಹಣವೂ ಕೂಡ, ಖರ್ಚುವೆಚ್ಚಗಳಿಗೆ ಮಾತ್ರ ಸಾಕಾಗುತ್ತಿತ್ತು.

ಸ್ವಾಮಿ ವಿವೇಕಾನಂದರು ಪಾಮರ್ ಎಂಬ ಶ್ರೀಮಂತನ ಮನೆಯಲ್ಲಿ ಸ್ವಲ್ಪ ದಿವಸಗಳ ಕಾಲ ತಂಗಿದ್ದರು. ಇದನ್ನು ಕಂಡು ಡೆಟ್ರಾಯ್ಟ್ ನಗರದ ಇನ್ನೊಬ್ಬ ಆತಿಥೇಯರಾಗಿದ್ದ ಶ್ರೀಮತಿ ಬ್ಯಾಗ್ಲಿ ಅವರಿಗೆ ಕಸಿವಿಸಿ. ತಮ್ಮ ಮನೆಗೆ ಮರಳಿಬರುವಂತೆ ವಿನಂತಿಸಿಕೊಳ್ಳುತ್ತಲೇ ಇದ್ದರು. ಇಷ್ಟಾದರೂ ಕೂಡ ಸ್ವಾಮೀಜಿ ಪಾಮರ್ ಅವರ ಮನೆಯ ವಾಸ್ತವ್ಯ ಬಹಳ ಆನಂದದಾಯಕವಾಗಿತ್ತೆಂದು ನೆನೆಸಿಕೊಳ್ಳುತ್ತಾರೆ.

ಸ್ವಾಮೀಜಿ ಸಾರ್ವಜನಿಕ ಸಭೆಗಳಲ್ಲಿ ಮಾತ್ರವಲ್ಲದೆ, ತಮ್ಮ ಆತಿಥೇಯರ ಮನೆಗಳಲ್ಲಿ ಆಹ್ವಾನಿತರನ್ನು ಕುರಿತು ಅನೇಕ ಸಭೆಗಳಲ್ಲಿ ಮಾತನಾಡಿದರು. ಈ ಸ್ನೇಹಕೂಟಗಳಲ್ಲಿ ಅವರು ಅನೇಕ ವಿಷಯಗಳನ್ನು ಚರ್ಚಿಸಿದರು. ಅವುಗಳಲ್ಲಿ ಭಾರತೀಯ ಜೀವನದ ಹಲವು ಆಯಾಮಗಳನ್ನು ಅವರು ಸ್ಪರ್ಶಿಸಿದರು. ಅವುಗಳ ವಿಷಯ ವೈವಿಧ್ಯವು ಭಾರತೀಯ ಗ್ರಾಮೀಣ ಜೀವನದಿಂದ ಹಿಡಿದು, ಹಿಂದೂಧರ್ಮದ ಸೂಕ್ಷ್ಮಸಿದ್ಧಾಂತಗಳವರೆಗೆ ವ್ಯಾಪಕವಾಗಿತ್ತು. ಅವರ ಈ ಪ್ರವಚನಗಳು ಭಾವನೆಗಳ ನವೀನತೆ ಮತ್ತು ಉತ್ಕೃಷ್ಟತೆಯಿಂದ ಕೇಳುಗರ ಮನಸ್ಸನ್ನು ಸೆಳೆಯುತ್ತಿದ್ದವು. ಅವರು ತಮ್ಮ ಪ್ರವಚನಗಳಲ್ಲಿ ಮಾಡಿದ ಸಣ್ಣ ಸಣ್ಣ ಟೀಕೆಟಿಪ್ಪಣಿಗಳು ಕೂಡ ವೃತ್ತಪತ್ರಿಕೆಗಳಲ್ಲಿ ಬಹಳ ಪ್ರಚಾರವನ್ನು ಪಡೆದುಕೊಳ್ಳುತ್ತಿದ್ದವು. ಡೆಟ್ರಾಯ್ಟ್ ಈವನಿಂಗ್ ನ್ಯೂಸ್ ಎಂಬ ಪತ್ರಿಕೆಯ ಮಾರ್ಚ್ ೨೧, ೧೮೯೪ರ ಸಂಚಿಕೆಯಲ್ಲಿ ಪ್ರಕಟವಾದ ಒಂದು ವರದಿಯು ಇದನ್ನು ಪುಷ್ಟೀಕರಿಸುತ್ತದೆ. ಇದರಲ್ಲಿ ಸ್ವಾಮೀಜಿ ತಮ್ಮ ಭಾಷಣಗಳಲ್ಲಿ ಉಲ್ಲೇಖಿಸುವ ಹಲವಾರು ಕಥೆಗಳು ಮತ್ತು ದೃಷ್ಟಾಂತಗಳ ಪ್ರಸ್ತಾಪವಿದೆ.

ಸ್ವಾಮೀಜಿ ಆತಿಥೇಯರ ಮನೆಗಳಲ್ಲಿ ಜರುಗಿದ ಸ್ನೇಹಕೂಟಗಳಲ್ಲಿ ಮಾಡಿದ ಮಧ್ಯಾಹ್ನದ ಭಾಷಣಗಳ ವರದಿಗಳು ಅಂದಿನ ಕಾಲದ ವೃತ್ತಪತ್ರಿಕೆಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಇದಕ್ಕೆ ಅಪವಾದವೆಂಬಂತೆ, ೧೮೯೪ರ ಮಾರ್ಚ್ ೧೭ರಂದು ಪ್ರಕಟವಾದ ಡೆಟ್ರಾಯ್ಟ್ ಟ್ರಿಬ್ಯೂನ್ ಪತ್ರಿಕೆಯ ಸಂಚಿಕೆಯಲ್ಲಿ ಅಂಥದೊಂದು ಸಭೆಯಲ್ಲಿ ತೆಗೆದುಕೊಂಡ ಟಿಪ್ಪಣಿಗಳನ್ನು ಆಧರಿಸಿದ ವರದಿಯೊಂದು ಪ್ರಕಟವಾಗಿದೆ. ಅದರಲ್ಲಿ ಸ್ವಾಮೀಜಿ ಪ್ರಖ್ಯಾತ ಲೇಖಕ ರುಡ್ಯಾರ್ಡ್ ಕಿಪ್ಲಿಂಗ್ ಭಾರತದ ಜನಜೀವನದ ಬಗ್ಗೆ ಬರೆದ ಕೆಲವು ವಿಷಯಗಳನ್ನು ಟೀಕಿಸುತ್ತಾರೆ. ಅವು ಭಾರತೀಯ ಸಾಮಾಜಿಕ ವ್ಯವಸ್ಥೆಯ ನೈಜ ಚಿತ್ರಣವನ್ನು ನೀಡುವುದಿಲ್ಲವೆಂದು ಅಮೆರಿಕದ ಜನಕ್ಕೆ ಮನಗಾಣಿಸುತ್ತಾರೆ.

ಇದಲ್ಲದೆ ಭಾರತೀಯ ಧರ್ಮಗಳ ಮೂಲದ ಬಗ್ಗೆ ಕ್ರೈಸ್ತ ಪಾದ್ರಿಗಳು ತಪ್ಪು ಮಾಹಿತಿಯನ್ನು ಜನರಲ್ಲಿ ಹರಡುತ್ತಿದ್ದರು. ಭಗವಾನ್ ಬುದ್ಧನ ೧೦ ಆದೇಶಗಳು ಯಹೂದಿ ಧರ್ಮದ ಸ್ಥಾಪಕ ಮೋಸೆಸ್ ಭಗವಂತನಿಂದ ಪಡೆದ ಹತ್ತು ಆದೇಶಗಳೇ

ಆಗಿವೆ; ಬೌದ್ಧ ಧರ್ಮವು ಯಹೂದಿ ಧರ್ಮದಿಂದ ಎರವಲು ಪಡೆದಿದೆ ಎಂದು ಒಬ್ಬ ಪ್ರಸಿದ್ಧ ಕ್ಯಾಥೊಲಿಕ್ ಪಾದ್ರಿಯು ಘೋಷಿಸಿದ್ದನು. ಸ್ವಾಮಿ ವಿವೇಕಾನಂದರು ಇಂಥ ಸುಳ್ಳು ಮಾಹಿತಿಗಳಿಗೆ ಇತಿಶ್ರೀಯನ್ನು ಹಾಡಿದರು. ೧೮೯೪ರ ಮಾರ್ಚ್ ೧೯ ಸೋಮವಾರದಂದು ಬೌದ್ಧ ಧರ್ಮವನ್ನು ಕುರಿತು ಅದ್ಭುತವಾದ ಉಪನ್ಯಾಸವನ್ನು ನೀಡಿದರು. ದುರದೃಷ್ಟವಶಾತ್ ಅದರ ವಿಸ್ತೃತ ವರದಿ ನಮಗೆ ಲಭ್ಯವಿಲ್ಲ. ನಮಗೆ ಸಿಕ್ಕಿರುವುದು ಟ್ರಿಬ್ಯೂನ್ ಪತ್ರಿಕೆಯ ಸಂಕ್ಷಿಪ್ತ ವರದಿಯಷ್ಟೇ. ಈ ವರದಿಯ ಕೆಲವು ಭಾಗಗಳು ಹೀಗಿವೆ:

''ಸ್ವಾಮಿ ವಿವೇಕಾನಂದರು ಸುಮಾರು ೧೫೦ (ಇನ್ನೊಂದು ಪತ್ರಿಕೆಯ ಪ್ರಕಾರ ಅದು ೫೦೦) ಸಭಿಕರು ಇದ್ದ ಸಭಾಂಗಣದಲ್ಲಿ ಬೌದ್ಧಧರ್ಮ, ಪೌರಸ್ತ್ಯ ಜ್ಯೋತಿಯ ಧರ್ಮ ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು. ಗೌರವಾನ್ವಿತ ಡಾನ್ ಎಂ. ಡಿಕಿನ್‌ಸನ್ ಅವರನ್ನು ಸಭಿಕರಿಗೆ ಪರಿಚಯಿಸಿದರು.

''ಸ್ವಾಮಿ ವಿವೇಕಾನಂದರು ತಮ್ಮ ಭಾಷಣದ ಮೊದಲಿಗೆ ಭಾರತದಲ್ಲಿ ಬೆಳೆದುಬಂದ ಮೊದಲ ಧರ್ಮಗಳ ವಿಶ್ಲೇಷಣೆಯನ್ನು ಮಾಡಿದರು. ಮೊದಲಿನ ವೈದಿಕ ಧರ್ಮದಲ್ಲಿ ಯಜ್ಞಯಾಗಾದಿಗಳೇ ಮುಖ್ಯವಾಗಿದ್ದವು. ಅವುಗಳಲ್ಲಿ ಪ್ರಾಣಿಗಳನ್ನು ಬಲಿಯಾಗಿ ಕೊಡುವ ಪದ್ಧತಿ ಸಾಮಾನ್ಯವಾಗಿತ್ತು. ತದನಂತರ ಸ್ವಾಮಿ ವಿವೇಕಾನಂದರು ಭಗವಾನ್ ಬುದ್ಧನ ಜೀವನವನ್ನು ಮತ್ತು ಮರಣವನ್ನು ವಿವರಿಸಿದರು. ಬುದ್ಧನು ಸೃಷ್ಟಿಗೆ ಕಾರಣವನ್ನು ಮತ್ತು ಅಸ್ತಿತ್ವದ ತರ್ಕವನ್ನು ಕುರಿತು ವಿಶದವಾಗಿ ಆಲೋಚಿಸಿದನು ಹಾಗೂ ಜೀವನದ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಲು ಪ್ರಾಮಾಣಿಕವಾಗಿ ಪ್ರಯತ್ನಿಸಿದನು.

''ಸ್ವಾಮಿ ವಿವೇಕಾನಂದರು ಮುಂದುವರಿದು, ಬುದ್ಧನು ಇತರೆಲ್ಲ ಮಾನವ ಜೀವಿಗಳಿಗಿಂತಲೂ ಉನ್ನತ ಜೀವನವನ್ನು ನಡೆಸಿದನು. ಎಲ್ಲರ ಕಲ್ಯಾಣವನ್ನು ಬಯಸದೆಯೇ, ಆತನು ತನ್ನ ಒಂದು ಉಸಿರನ್ನೂ ಆಡಲಿಲ್ಲ, ರೊಟ್ಟಿಯ ಒಂದು ತುಂಡನ್ನೂ ಉಣ್ಣಲಿಲ್ಲ ಎಂದು ಅವನ ಸ್ನೇಹಿತರು ಮಾತ್ರವಲ್ಲ, ಶತ್ರುಗಳೂ ಹೇಳದೆ ಇರಲು ಸಾಧ್ಯವಿಲ್ಲ. 'ಬುದ್ಧನು ಜೀವಿಯ ದೇಹಾಂತರವನ್ನು ಎಂದಿಗೂ ಬೋಧಿಸಲಿಲ್ಲ' ಎಂದು ವಿವೇಕಾನಂದರು ಒತ್ತಿಹೇಳಿದರು. ಇದಕ್ಕೆ ಬದಲಾಗಿ, ಮನುಷ್ಯನ ಆತ್ಮವೆಂಬುದು ಸಮುದ್ರದ ಅಲೆಗಳಂತೆ. ಅದು ಸ್ಥಿರವಲ್ಲ, ಕಾಣಿಸಿಕೊಂಡು, ನಂತರ ನಾಶವಾಗುವ ನಶ್ವರವಾದ ತತ್ತ್ವ ಎಂದು ಬುದ್ಧನು ವಾದಿಸುತ್ತಾನೆ. ಎಲ್ಲವೂ ಕ್ಷಣಿಕವಾದುದು, ಅದು ಮುಂದಿನ ಕ್ಷಣಕ್ಕೆ ಏನನ್ನೂ ಉಳಿಸುವುದಿಲ್ಲ. ಇದಲ್ಲದೆ ಬುದ್ಧನು ದೇವರ ಅಸ್ತಿತ್ವವನ್ನು ನಿರಾಕರಿಸಲೂ ಇಲ್ಲ, ಅದೇ ಸಮಯದಲ್ಲಿ ದೇವರ ಅಸ್ತಿತ್ವವನ್ನು ಬೋಧಿಸಲೂ ಇಲ್ಲ.

''ನಾವು ಏಕೆ ತಾನೇ ಒಳ್ಳೆಯವರಾಗಿರಬೇಕು?'' ಎಂದು ಅವನ ಶಿಷ್ಯರು ಕೇಳಿದರು. ಬುದ್ಧನು ಉತ್ತರಿಸಿದನು: ''ಏಕೆಂದರೆ, ನೀವು ಒಳ್ಳೆಯತನದ ವಾರಸುದಾರರಾಗಿರುವಿರಿ. ಅದನ್ನೇ ಮುಂದಿನ ಪೀಳಿಗೆಗೆ ನಿಮ್ಮ ಕೊಡುಗೆಯಾಗಿ ನೀಡಿರಿ. ಎಲ್ಲರೂ ಒಳ್ಳೆಯದಕ್ಕಾಗಿಯೇ, ಒಳ್ಳೆಯತನದ ಒಟ್ಟುಗೂಡುವಿಕೆಗಾಗಿಯೇ ಮುಂದುವರಿಯಲಿ.''

''ಬುದ್ಧನು ಜಗತ್ತು ಕಂಡ ಮೊದಲ ಪ್ರವಾದಿ. ಅವನು ಯಾರನ್ನೂ ನಿಂದಿಸಲಿಲ್ಲ ; ತನ್ನನ್ನು ವೈಭವೀಕರಿಸಿಕೊಳ್ಳಲಿಲ್ಲ. ಅವನು ಧರ್ಮದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮೋಕ್ಷಕ್ಕಾಗಿ ಪರಿಶ್ರಮಪಡಬೇಕೆಂದು ನಂಬಿದ್ದನು. ತನ್ನ ಮರಣಶಯ್ಯೆಯಲ್ಲಿಯೂ ಅವನು ಹೀಗೆ ಘೋಷಿಸಿದನು: 'ನಾನು ನಿಮಗೆ ಸಹಾಯ ಮಾಡಲಾರೆ. ಯಾರೊಬ್ಬರೂ ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲ. ಯಾರನ್ನೂ ಅವಲಂಬಿಸದಿರಿ. ನಿಮ್ಮ ಮೋಕ್ಷಕ್ಕಾಗಿ ನೀವೇ ಪರಿಶ್ರಮ ಪಡಬೇಕು.'

''ಬುದ್ಧನು ಮನುಷ್ಯರ ನಡುವೆ ಇರುವ, ಹಾಗೆಯೇ ಎಲ್ಲ ಜೀವಿಗಳ ನಡುವಿನ ಅಸಮಾನತೆಯನ್ನು ತೊಡೆದುಹಾಕಲು ಪ್ರಯತ್ನಿಸಿದನು. ಎಲ್ಲ ಜೀವಿಗಳೂ ಸಮಾನರು ಎಂದು ಆತನು ಬೋಧಿಸಿದನು. 'ಒಳ್ಳೆಯವರಾಗಿರಿ; ಒಳ್ಳೆಯದನ್ನೇ ಮಾಡಿರಿ. ದೇವರೊಬ್ಬ ಇರುವುದಾದರೆ, ಆತನನ್ನು ನೀವು ಕೇವಲ ಒಳಿತಿನಿಂದ ಮಾತ್ರವೇ ಸೇರಬಲ್ಲಿರಿ. ದೇವರು ಇಲ್ಲವೆಂದಾದರೆ, ಒಳ್ಳೆಯವರಾಗಿ ಇರುವುದೇ ಉತ್ತಮವಾದುದು' ಎಂದು ಅವನು ಬೋಧಿಸಿದನು.

''ಧರ್ಮಪ್ರಚಾರಕರನ್ನು ಹುಟ್ಟಿಹಾಕಿದವರಲ್ಲಿ ಬುದ್ಧನು ಮೊದಲಿಗನು. ಭಾರತ ದೇಶದ ಲಕ್ಷಾಂತರ ಜನರಿಗೆ ಆತನು ಪಾಪವಿಮೋಚಕನಾಗಿ ಹುಟ್ಟಿಬಂದನು. ಆ ಸಾಮಾನ್ಯ ಜನರು ಈತನ ತತ್ತ್ವವನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ, ಆದರೆ ವ್ಯಕ್ತಿಯಾಗಿ ಆತನ ಉದಾತ್ತತೆಯನ್ನು ಕಂಡುಕೊಂಡರು ಮತ್ತು ಆತನ ಉಪದೇಶಗಳ ಶ್ರೇಷ್ಠತೆಯನ್ನು ಗ್ರಹಿಸಿದರು. ಹೀಗಾಗಿ ಅವರೆಲ್ಲ ಬುದ್ಧನನ್ನು ಹಿಂಬಾಲಿಸಿದರು.''

ತಮ್ಮ ಭಾಷಣದ ಕಡೆಯಲ್ಲಿ ಸ್ವಾಮಿ ವಿವೇಕಾನಂದರು ಬೌದ್ಧಧರ್ಮವು ಕ್ರೈಸ್ತ ಧರ್ಮದ ಆಧಾರಸ್ತಂಭವೆಂದು ಪ್ರತಿಪಾದಿಸಿದರು.

ಸ್ವಾಮಿ ವಿವೇಕಾನಂದರ ಬೌದ್ಧಧರ್ಮದ ಮೇಲಿನ ಉಪನ್ಯಾಸವು ಡೆಟ್ರಾಯ್ಟ್ ನಗರದಲ್ಲಿ ಅವರ ಕಟ್ಟಕಡೆಯ ಪ್ರವಚನವೆಂದು ಎಲ್ಲ ಕಡೆ ಪ್ರಚಾರ ಮಾಡಲಾಗಿತ್ತು. ಅದು ಹಾಗಾಗಬೇಕಿತ್ತು ಕೂಡ. ಏಕೆಂದರೆ ೧೮೯೪ರ ಮಾರ್ಚ್ ೨೦ ರಂದು ಸ್ವಾಮೀಜಿಯವರಿಗೆ ಬೇ ಸಿಟಿ ಎಂಬ ನಗರದಲ್ಲಿ ಒಂದು ಉಪನ್ಯಾಸದ ಕಾರ್ಯಕ್ರಮವಿತ್ತು. ಹಾಗೂ ಮಾರ್ಚ್ ೨೧ರಂದು ಸಾಗಿನಾ ಎಂಬ ಇನ್ನೊಂದು ಪಟ್ಟಣದಲ್ಲಿ ಕಾರ್ಯಕ್ರಮವು ನಿರ್ಧಾರಿತವಾಗಿತ್ತು. ಇವೆಲ್ಲವೂ ಡೆಟ್ರಾಯ್ಟ್ ನಗರದ ಸಮೀಪದಲ್ಲಿಯೇ ಇದ್ದ ಸಣ್ಣ ಸಣ್ಣ ಪಟ್ಟಣಗಳಾಗಿದ್ದವು. ಆದರೆ ಈ ಪ್ರವಚನಗಳನ್ನು ನೀಡಿದ ಮೇಲೆ ಡೆಟ್ರಾಯ್ಟ್ ನಗರಕ್ಕೆ ಮರಳಿ

ಬರುವಂತೆ ಅವರ ಸ್ನೇಹಿತರು ಒತ್ತಾಯಿಸಿದರು. ಹೀಗಾಗಿ ಅವರು ಈ ಕಾರ್ಯಕ್ರಮಗಳನ್ನು ಮುಗಿಸಿಕೊಂಡು, ಮರಳಿ ಬಂದು, ಮತ್ತೊಂದು ಭಾಷಣವನ್ನು ಮಾಡಿದರು. ಈ ಬಗ್ಗೆ ಸಂಡೇ ನ್ಯೂಸ್ ಟ್ರಿಬ್ಯೂನ್ ಎಂಬ ಪತ್ರಿಕೆಯು ತನ್ನ ೧೮೯೪ರ ಮಾರ್ಚ್ ೧೮ರ ಸಂಚಿಕೆಯಲ್ಲಿ ಹೀಗೆ ವರದಿಮಾಡಿತು:

''ಸ್ವಾಮಿ ವಿವೇಕಾನಂದರು 'ಭಾರತೀಯ ಸ್ತ್ರೀಯರು' ಎಂಬ ವಿಷಯದ ಬಗ್ಗೆ ಯೂನಿಟೇರಿಯನ್ ಚರ್ಚಿನಲ್ಲಿ ಭಾಷಣ ಮಾಡುವವರಿದ್ದಾರೆ. ಈ ವಿಷಯದ ಬಗ್ಗೆ ಅವರು ಇನ್ನೂ ಇದುವರೆಗೆ ಮಾತನಾಡಿಲ್ಲ. ಅವರ ನಿಕಟ ಸ್ನೇಹಿತರು ಈ ಭಾಷಣದಲ್ಲಿ ಶಿಕ್ಷಣವನ್ನಷ್ಟೇ ಅಲ್ಲ , ಮನರಂಜನೆಯನ್ನೂ ಹೊಂದಬಹುದೆಂದು ನಿರೀಕ್ಷಿಸಲಾಗಿದೆ.''

ಸ್ವಾಮೀಜಿ ಈಗಾಗಲೇ ಈ ವಿಷಯದ ಬಗ್ಗೆ ತಾವು ನಡೆಸಿದ ಹಲವಾರು ಮಧ್ಯಾಹ್ನದ ಸ್ನೇಹಕೂಟಗಳಲ್ಲಿ ಚರ್ಚೆ ಮಾಡಿದ್ದರು. ಮಹಿಳೆಯರ ಬಗ್ಗೆ ಹಿಂದೂ ಆದರ್ಶವು ಅದೆಷ್ಟು ಉನ್ನತ ಮಟ್ಟದ್ದು ಎಂದು ಅವುಗಳಲ್ಲಿ ಅವರು ಬಣ್ಣಿಸಿದ್ದರು. ಇದನ್ನು ಕೇಳಿದ ಸಭಿಕರಿಗೆ ಈ ವಿವರಣೆಯು ಸ್ಫೂರ್ತಿಭರಿತವಾಗಿಯೂ ಹಾಗೆಯೇ ಅತ್ಯಂತ ಶ್ರೇಷ್ಠಮಟ್ಟದ್ದೂ ಆಗಿ ಕಂಡುಬಂದಿತು. ಸ್ವಾಮೀಜಿ ಈ ವಿಷಯದಲ್ಲಿ ಕ್ರೈಸ್ತ ಮಿಷನರಿಗಳ ಅಪಪ್ರಚಾರದಿಂದ ಜನರಲ್ಲಿ ಉಂಟಾಗಿದ್ದ ತಪ್ಪುಭಾವನೆಗಳನ್ನು ದೂರಮಾಡಿದ್ದರು. ಇಂಥ ಮುಖ್ಯವಾದ ವಿಷಯದ ಬಗ್ಗೆ ಸಾರ್ವಜನಿಕರೂ ಮಾಹಿತಿಯನ್ನು ಪಡೆಯಬೇಕು ಎಂದು ಅನೇಕರಿಗೆ ಅನ್ನಿಸಿತು. ಇದೇ ಕಾರಣದಿಂದ ಈ ಪ್ರವಚನವನ್ನು ಆಯೋಜಿಸಲಾಯಿತು. ಆದರೆ, ದುರದೃಷ್ಟವಶಾತ್, ಪತ್ರಿಕೆಗಳು ಈ ಭಾಷಣದ ಸಂಕ್ಷಿಪ್ತ ವರದಿಯನ್ನು ಮಾತ್ರವೇ ಪ್ರಕಟಿಸಿವೆ. ಅವುಗಳಲ್ಲಿ ಫ್ರೀ ಪ್ರೆಸ್ ಜರ್ನಲ್ ಪ್ರಕಟಿಸಿರುವ ವರದಿ ಹೀಗಿದೆ:

''**ಭಾರತೀಯ ಮಹಿಳೆಯರು**

**ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆಯು ಹೆಂಡತಿ; ಪೌರಸ್ತ್ಯ ದೇಶಗಳಲ್ಲಿ ಆಕೆಯು ತಾಯಿ**

ಸ್ವಾಮಿ ವಿವೇಕಾನಂದರು ಕಳೆದ ರಾತ್ರಿ ಯೂನಿಟೇರಿಯನ್ ಚರ್ಚಿನಲ್ಲಿ ಭಾರತೀಯ ಸ್ತ್ರೀಯರು ಎಂಬ ವಿಷಯವಾಗಿ ಮಾತನಾಡಿದರು. ಇದರಲ್ಲಿ ಅವರು ಪ್ರಾಚೀನ ಭಾರತದಲ್ಲಿ ಮಹಿಳೆಯರಿಗಿದ್ದ ಉನ್ನತ ಸ್ಥಾನಮಾನಗಳ ಬಗ್ಗೆ ಬಣ್ಣಿಸಿದರು. ಪವಿತ್ರ ಗ್ರಂಥಗಳಲ್ಲಿ ಅವರನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತಿತ್ತು; ಮಹಾತ್ಮರೆಂದೇ ಪರಿಗಣಿಸಲಾಗುತ್ತಿತ್ತು. ಅವರ ಆಧ್ಯಾತ್ಮಿಕ ಸುಸಂಪನ್ನತೆ ಬಹಳ ಶ್ಲಾಘಾರ್ಹ. ಭಾರತೀಯ ಮಹಿಳೆಯರನ್ನು ಪಾಶ್ಚಾತ್ಯ ಮಾನದಂಡದಿಂದ ಅಳೆಯುವುದು ಸರಿಯಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಹೆಂಡತಿಯಾಗಿ ಮಹಿಳೆಯನ್ನು ಗೌರವಿಸಲಾಗುವುದು; ಪೌರಸ್ತ್ಯ ದೇಶಗಳಲ್ಲಿ ಆಕೆಯನ್ನು ತಾಯಿಯಾಗಿ ಪೂಜಿಸಲಾಗುವುದು. ಹಿಂದೂಗಳು ತಾಯಿಯನ್ನು ಅತ್ಯಂತ ಗೌರವದಿಂದ ಕಾಣುತ್ತಾರೆ. ಸಂನ್ಯಾಸಿಗಳು ಕೂಡ ತಾಯಿಯ ಮುಂದೆ ತಮ್ಮ ಹಣೆಯನ್ನು ನೆಲಕ್ಕೆ ಸ್ಪರ್ಶಿಸಿ ನಮಸ್ಕರಿಸಬೇಕು. ಮಹಿಳೆಯರಲ್ಲಿ ಚಾರಿತ್ರ್ಯಕ್ಕೆ ಬಹಳ ಮಹತ್ವ ಕೊಡಲಾಗುತ್ತದೆ.''

ಈ ಪ್ರವಚನವು ಸ್ವಾಮಿ ವಿವೇಕಾನಂದರು ನೀಡಿದ ಪ್ರವಚನಗಳಲ್ಲೆಲ್ಲ ಬಹಳ ಆಸಕ್ತಿಕರವಾಗಿತ್ತು. ಇದನ್ನು ಜನರು ಹಾರ್ದಿಕವಾಗಿ ಸ್ವೀಕರಿಸಿದರು.

ಸ್ವಾಮೀಜಿ ಈ ಪ್ರವಚನದಲ್ಲಿ ತಾವು ಮಧ್ಯಾಹ್ನದ ಸ್ನೇಹಕೂಟಗಳಲ್ಲಿ ಹೇಳಿದ್ದಕ್ಕಿಂದ ಹೆಚ್ಚೇನೂ ನುಡಿಯಲಿಲ್ಲ. ಅದೃಷ್ಟವಶಾತ್ ಯಾರೋ ಒಬ್ಬರು ಈ ಔಪಚಾರಿಕ ಸ್ನೇಹಕೂಟಗಳ ಭಾಷಣಗಳ ಟಿಪ್ಪಣಿಗಳನ್ನು ತೆಗೆದುಕೊಳ್ಳುವ ವಿವೇಕವನ್ನು ತೋರಿದ್ದಾರೆ. ಅವುಗಳಲ್ಲಿ ಡೆಟ್ರಾಯ್ಟ್ ಭಾಷಣದಲ್ಲಿ ಇಲ್ಲದಿರುವ ಅನೇಕ ವಿಷಯಗಳನ್ನು ಕಾಣಬಹುದು. ಈ ಟಿಪ್ಪಣಿಗಳಲ್ಲಿ ಸ್ವಾಮೀಜಿ ಭಾರತೀಯ ಮಹಿಳೆಯ ಬಗ್ಗೆ ಹತ್ತು ಹಲವು ಅಂಶಗಳನ್ನು ವಿವರಿಸಿರುವುದು ಕಂಡುಬರುತ್ತದೆ.

ಈ ಟಿಪ್ಪಣಿಗಳ ಪ್ರಕಾರ, ಸ್ವಾಮೀಜಿ ಭಾರತೀಯ ನಾರಿಯರು ಜಗತ್ತಿನಲ್ಲಿಯೇ ಅತ್ಯಂತ ಪವಿತ್ರಸ್ವರೂಪಿಣಿಯರು ಎಂದು ವರ್ಣಿಸುತ್ತಾರೆ. ಅವರು ಪರಮಾತ್ಮನು ಸೃಷ್ಟಿಸಿದ ಅದ್ಭುತ ಎಂದು ಬಣ್ಣಿಸುತ್ತಾರೆ. ಸತಿ ಪದ್ಧತಿಯಲ್ಲಿ ಸ್ತ್ರೀಯರನ್ನು ದಹಿಸುವ ಬಗ್ಗೆ ಅವರು ಸತ್ಯವಾದ ವಿವರಣೆಯನ್ನು ನೀಡಿ, ಕ್ರೈಸ್ತಧರ್ಮದಲ್ಲಿ ಪ್ರಚಲಿತವಾಗಿದ್ದ ಮಾಟಗಾತಿಯನ್ನು ಸುಡುವ ಪದ್ಧತಿಯಷ್ಟೇನೂ ಅದು ಭೀಕರವಾಗಿರಲಿಲ್ಲವೆಂದು ತಿಳಿ ಹೇಳುತ್ತಾರೆ. ಹಿಂದೂ ಸಮಾಜವು ಸ್ತ್ರೀಯರಿಗೆ ನೀಡಿದ್ದ ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಸ್ಥಾನಮಾನಗಳನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತಾರೆ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕೇವಲ ಭೋಗ ವಸ್ತುವಾಗಿ ನೋಡುತ್ತಿದ್ದ ಸ್ತ್ರೀಯರಿಗೆ ಹೇಗೆ ಹಿಂದೂ ಸಮಾಜವು ಜಗಜ್ಜನನಿಯ ಉನ್ನತ ಪಟ್ಟವನ್ನು ನೀಡಿತು ಎಂದು ವಿವರಿಸುತ್ತಾರೆ.

ಭಾರತೀಯ ಸ್ತ್ರೀಯರ ಬಗೆಗಿನ ಪ್ರವಚನ ಸ್ವಾಮಿ ವಿವೇಕಾನಂದರು ಕ್ರಿಯಾಶೀಲ ನಗರವಾದ ಡೆಟ್ರಾಯ್ಟ್‌ನಲ್ಲಿ ನೀಡಿದ ಕಟ್ಟಕಡೆಯ ಭಾಷಣವಾಗಿತ್ತು. ಅನಂತರ ಅವರು ಅಮೆರಿಕದ ಮಧ್ಯಪಾಶ್ಚಾತ್ಯ ಪ್ರದೇಶದಿಂದ ದೂರ ಹೋಗಲು ಇಚ್ಛಿಸಿದರು. ಈ ಬಗ್ಗೆ ಅವರು ಶ್ರೀಮತಿ ಹೇಲ್ ಅವರಿಗೆ ೧೮೯೪ರ ಮಾರ್ಚ್ ೨೭ರಂದು ಹೀಗೆ ಪತ್ರ ಬರೆಯುತ್ತಾರೆ:

''ನಾನು ಇನ್ನೆರಡು ದಿನಗಳಲ್ಲಿ ಬಾಸ್ಟನ್ ನಗರಕ್ಕೆ ಹೋಗುತ್ತಿದ್ದೇನೆ. ನನ್ನ ಹತ್ತಿರ ಈಗ ೫೭ ಡಾಲರುಗಳು ಇವೆ. ಇದು ಬಹಳ ಕಾಲದವರೆಗೆ ನನಗೆ ಸಾಕು. ಯಾವಾಗಲೂ ಏನೋ ಒಂದು ದೈವವಶಾತ್ ಲಭಿಸುತ್ತದೆ. ಇದು ಆಗುವುದೇ ಹಾಗೆ. ಬಾಸ್ಟನ್‌ನಿಂದ ಮತ್ತೆಲ್ಲಿಗೆ ಹೋಗುವೆನೋ ತಿಳಿಯದು. ನಾನು ಶ್ರೀಮತಿ ಬ್ರೀಡ್ ಎಂಬಾಕೆಗೆ ಕಾಗದ ಬರೆದಿದ್ದೇನೆ. ಆದರೆ ಆಕೆಯಿಂದ ಇನ್ನೂ ಉತ್ತರ ಬಂದಿಲ್ಲ. ಭಗವಂತ ಇಚ್ಛೆಯಂತೆ ಎಲ್ಲವೂ ನಡೆಯುತ್ತದೆ. ನಾನಲ್ಲ, ನೀನೇ – ಇದೇ ಸದಾಕಾಲಕ್ಕೂ ನನ್ನ ಜೀವನ ಧ್ಯೇಯವಾಗಿದೆ.'' *(ಮುಂದುವರಿಯುವುದು)*